ವಿದ್ಯಾರ್ಥಿನಿಲಯ ಕಟ್ಟಲು	ಕ.ಭೂ. ಸೇನಾ ಅಭಿವೃದ್ಧಿ ನಿಗಮಕ್ಕೆ ಜಿಡುಗಡೆ ಮಾಡಿದೆ.	
8. ಪರಿಶಿಷ್ಟ ಜಾತಿಯ ಬಾಲಕರ	90-91	ನಿರ್ದೇಶಕರ
ವಿದ್ಯಾರ್ಥಿನಿಲಯ ಕಟ್ಟಲು	91-92	ಪಿ.ಡಿ. ಖಾತೆಯಲ್ಲಿ
	92-93	ಇತ್ತಲಾಗಿದೆ.
9. ಪರಿಶಿಷ್ಟ ವರ್ಗದ ಬಾಲಕಿಯರ	90-91	92-93ರಲ್ಲಿ ಹಣ ಜಡುಗಡೆ ಮಾಡಿದೆ.
ವಿದ್ಯಾರ್ಥಿನಿಲಯ ಕಟ್ಟಲು	91-92	
	92-93	
10. ವೈದ್ಯಕೀಯ ಮತ್ತು ತಾಂತ್ರಿಕ	90-91	2.62
ವಿದ್ಯಾರ್ಥಿಗಳಿಗೆ ಬುಕ್‌ಬ್ಯಾಂಕ್	91-92	4.49
ಯೋಜನೆ	92-93	3.45
11. ಆನೈರ್ಮಲ್ಯ ವೃತ್ತಿಯಲ್ಲಿ	90-91	0.99
ತೊಡಗಿರುವ ಮಕ್ಕಳಿಗೆ	91-92	1.00
(ಪ.ಜಾತಿ) ವಿದ್ಯಾರ್ಥಿವೇತನ	92-93	2.90
ನೀಡುವ ಬಗ್ಗೆ		

ದಾವಣಗೆರೆ ನಗರದಲ್ಲಿ ದೊಡ್ಡ ಪ್ರಮಾಣದ ಕೈಗಾರಿಕೆಯ ಸ್ಥಾಪನೆ

1113 (1700): ಶ್ರೀ ಪೈ.ಬಿ. ವೀರಣ್ಣ (ದಾವಣಗೆರೆ):-

ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಾವಣಗೆರೆ ನಗರದಲ್ಲಿ ಜನಸಂಖ್ಯೆ ಹೆಚ್ಚುತ್ತಿದ್ದು ನಿರುದ್ಯೋಗಿಗಳು ಸಹ ಹೆಚ್ಚಿನ ಸಂಖ್ಯೆಯಲ್ಲಿ ಇರುವುದರಿಂದ ಅಲ್ಲಿಗೆ ಒಂದು ದೊಡ್ಡ ಪ್ರಮಾಣದ ಕೈಗಾರಿಕೆಯನ್ನು ಸ್ಥಾಪಿಸುವ ಯೋಜನೆ ಸರ್ಕಾರಕ್ಕಿದೆಯೇ;

ಆ) ಇದ್ದಲ್ಲಿ ಯಾವಾಗ ಸ್ಥಾಪಿಸಲಾಗುವುದು ?

ಶ್ರೀಮತಿ ನಾಗಮ್ಮ ಕೇಶವಮೂರ್ತಿ (ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಮಂತ್ರಿಗಳು):-

ಅ) ಸಧ್ಯದಲ್ಲಿ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಪರಿಶಿಷ್ಟ ಜಾತಿ ಮತ್ತು ವರ್ಗಗಳ ಪಟ್ಟಿಗೆ ಇತರೆ ಜಾತಿಗಳ ಸೇರ್ಪಡೆಗೆ ರಚಿಸಲಾದ ಉಪಸಮಿತಿ

1114 (1919): ಶ್ರೀ ಎಸ್. ರುದ್ರಪ್ಪ (ತುರುವೇಕೆರೆ):-

ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?